ಶ್ರೀ ಜೀವರಾಜ ಆಳ್ವ.—ಸ್ವಾಮಿ, ಸರ್ಕಾರ ಅದನ್ನು ಪೂರ್ಣವಾಗಿ ಒಪ್ಪಿಕೊಳ್ಳುತ್ತದೆಂದು ಹೇಳಿದ್ದೇನೆ. ಈ ಬಗ್ಗೆ ಅನುಶಾಸನ ಬಂದ ತಕ್ಷಣ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ ಮತ್ತು ಉಳಿದದ್ದು ಸ್ವಲ್ಪ ವಿಧಾನವಾಗಿ ಇಶ್ಯೂ ಆಗುತ್ತದೆ.

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮತ್ತು ಧಾರವಾಡ ವಿಶ್ವವಿದ್ಯಾನಿಲಯಗಳಲ್ಲಿ ನಿವೃತ್ತ ವೇತನ ಕೊಡುವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಅದನ್ನು ಕೊಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಜೀವರಾಜ ಆಳ್ವ.—ಮಾನ್ಯ ಅಧ್ಯಕ್ಷರೇ, ಕಾಮನ್ ಸ್ಟ್ಯಾಚೂಟ್ಸ್ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇರೆ ಬೇರೆ ರೀಜನ್ಸ್ ಇವೆ. ಆ ವಿಶ್ವವಿದ್ಯಾನಿಲಯಗಳು ಯಾವಾಗ ಪ್ರಾರಂಭವಾದವು, ಅದರ ಪರಿಮಿತಿ ಏನು ಅದರ ಹಿನ್ನೆಲೆಯಲ್ಲಿ ಹೋಗುತ್ತದೆ. ನಾವು ಕಾರಣ ತಿಳಿದುಕೊಳ್ಳುವ ಮೊದಲು ಪ್ರಹಾರ ಕೊಡುತ್ತಿದ್ದೇವೆ. ಆದ್ದರಿಂದ ಪುನಃ ಕಾರಣ ತಿಳಿದುಕೊಳ್ಳುವ ಅಗತ್ಯವಿಲ್ಲ.

ಶ್ರೀ ವೇದಾಂತ ಹೆಬ್ಬಾರ್.—ಅವರಿಗೆ ನಿವೃತ್ತಿ ವೇತನ ಕೊಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಲಾಭ ಇದೆಯೇ ಹೊರತು ನಷ್ಟವಿಲ್ಲ. ನಾನೊಂದು ಉದಾಹರಣೆ ಕೊಡುತ್ತೇನೆ. ಪ್ರೊವಿಡೆಂಟ್ ಫಂಡ್ ಒಂದು ವರ್ಷಕ್ಕೆ ೨,೮೬,೦೦೦ ರೂಪಾಯಿಗಳು ಮೈಸೂರಿಂ ವಿಶ್ವವಿದ್ಯಾನಿಲಯಕ್ಕೆ ಉಳಿಯುತ್ತದೆ. ಇ.ಎಸ್.ಐ.ನಿಂದ ಸುಮಾರು ೪೬– ೭ ಸಾವಿರ ರೂಪಾಯಿಗಳು ಉಳಿಯುತ್ತದೆ. ತಮಗೆ ಗೊತ್ತಿದೆ ಪ್ರಾವಿಡೆಂಟ್ ಫಂಡ್ ಒಟ್ಟಿಗೆ ೨೦–೨೫ ಸಾವಿರ ರೂಪಾಯಿಗಳು ಬರುತ್ತದೆ. ಕಾರ್ಮಿಕ ಕ್ಷೇತ್ರದಲ್ಲಿದ್ದಂತಹವರಿಗೆ ಒಂದೇ ಸಾರಿ ಅಷ್ಟು ಹಣ ಬಂದರೆ ಇಟ್ಟುಕೊಳ್ಳುವುದಿಲ್ಲ. ಮಂದೆ ಅವನ ಸಂಸಾರಕ್ಕೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಅವರಿಗೆ ನಿವೃತ್ತಿ ವೇತನ ಕೊಡುವುದು ಒಳ್ಳೆಯದು. ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ? ಸಿಂಡಿಕೇಟ್ ರೆಸಲ್ಯೂಷನ್ ಮಾಡಿದೆ. ನಾವು ಹಿಂದಿನ ವಿದ್ಯಾಮಂತ್ರಿಗಳಲ್ಲಿ ಸಹ ಮನವಿ ಮಾಡಿಕೊಂಡಿದ್ದೆವು. ತಮ್ಮನ್ನು ಸಹ ಭೇಟಿಯಾಗಿದ್ದೆವು. ದಯಮಾಡಿ ಆ ನೌಕರರಿಗೆ ಪೆನ್‌ಷನ್ ಕೊಡುವಂತೆ ವ್ಯವಸ್ಥೆ ಮಾಡಿ.

೧೧–೩೦ ಎ. ಎಂ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ. ಇದನ್ನು ಒಪ್ಪಿದ್ದಾಗಿದೆ. ಇದರ ಬಗ್ಗೆ ಅನುಶಾಸನ ಆಗಬೇಕಾಗಿದೆ. ಅನುಶಾಸನ ಆಗುವುದನ್ನು ನಾವು ಕಾಯುತ್ತಿದ್ದೇವೆ. ಅದು ಆದ ತಕ್ಷಣ ಆದಷ್ಟು ಬೇಗ ಅಂದರೆ ಕೆಲವೇ ದಿನಗಳಲ್ಲಿ ಅಥವಾ ಕೆಲವೇ ವಾರಗಳಲ್ಲಿ ಮಾಡಲಾಗುತ್ತದೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ನಿಯಮ ೩೩ಳಿರ ಮೇರೆಗೆ

೧) ಬೈಲಹೊಂಗಲದಿಂದ ಸೋಗಲ ಕ್ಷೇತ್ರಕ್ಕೆ ಸೂಪರ್ ಡಿಲಕ್ಸ್ ಬಸ್ಸನ್ನು ಓಡಿಸಲು ಒತ್ತಾಯ

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಂ ಬೈಲಹೊಂಗಲದಿಂದ ಸೋಗಲ ಕ್ಷೇತ್ರ ಮಾರ್ಗವಾಗಿ ಸಾಯಂಕಾಲ ಬೆಂಗಳೂರಿಗೆ ಹೋಗುವ ಸಲುವಾಗಿ ಸುಖವಿಕಾರ (ಸೂಪರ್ ಡಿಲಕ್ಸ್) ಬಸ್ಸಿನ ಅವಶ್ಯಕತೆ ಬಹಳ ಇರುತ್ತದೆ. ಪ್ರತಿ ದಿವಸ ಸಾಯಂಕಾಲ ಚಿಕ್ಕೋಡಿ ಬೆಂಗಳೂರು ಬಸ್ಸು ಬೈಲಹೊಂಗಲ ಮಾರ್ಗವಾಗಿ ಹೋಗುತ್ತದೆ. ಆ ಬಸ್ಸಿನಲ್ಲಿ ಪ್ರತಿ ದಿವಸ ಬೈಲಹೊಂಗಲದಿಂದ ಕನಿಷ್ಟ ೫೦ ಪ್ಯಾಸೆಂಜರ್‌ಗಳು ಹತ್ತುತ್ತಿದ್ದು ಬೈಲಹೊಂಗಲದಿಂದ ಹೋಗುವ ಜನರಿಗೆ ಬಹಳೇ ತ್ರಾಸು ಆಗುತ್ತದೆ. ಪ್ರತಿ ದಿವಸ ವಕೀಲರು, ವ್ಯಾಪಾರಸ್ಥರು ಮತ್ತು ನೌಕರರು ಬೈಲಹೊಂಗಲದಿಂದ ಬೆಂಗಳೂರಿಗೆ ಹೋಗುತ್ತಾರೆ. ಆದಕಾರಣ ಪ್ರಯಾಸಿಗರ ಸೌಲಭ್ಯಕ್ಕಾಗಿ ಪ್ರತಿ ದಿವಸ ಸಾಯಂಕಾಲ ಬೈಲಹೊಂಗಲದಿಂದ ಶ್ರೀ ಸೋಗಲಕ್ಷೇತ್ರ ಮಾರ್ಗವಾಗಿ ಒಂದು "ಸೂಪರ್ ಡಿಲಕ್ಸ್" ಬಸ್ಸಿನ ಸವಿಯನ್ನು ನಮ್ಮ ಊರಿನ ಜನರೂ ಉಪಯೋಗಿಸುವ ಸದಾವಕಾಶವನ್ನು

ಒದಗಿಸಿ ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಸಾರಿಗೆ ಸಚಿವರನ್ನು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಸೋಗಲ ಗ್ರಾಮವು ಬೆಳಗಾವಿ ಜಿಲ್ಲೆಯ ಸೌಂದತ್ತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ೧೯೮೧ರ ಜನಗಣತಿಯ ಪ್ರಕಾರ ಒಟ್ಟು ಳ್ಳಿ ಜನ ಸಂಖ್ಯೆ ಹೊಂದಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತಾಲ್ಲೂಕು ಕೇಂದ್ರವಾದ ಬೈಲಹೊಂಗಲಕ್ಕೆ ರಾಜಧಾನಿಯೊಡನೆ ನೇರ ಹಗಲು ವೇಗದೂತ ಸಾರಿಗೆಯು ಸಂಪರ್ಕ ಕಲ್ಪಿಸಿದೆ. ಇದೇ ರೀತಿ ರಾತ್ರಿ ಪ್ರಯಾಣ ಅಪೇಕ್ಷಿಸುವ ಜನತೆಗಾಗಿ ಬೈಲಹೊಂಗಲ ಮಾರ್ಗವಾಗಿ ಚಿಕ್ಕೋಡಿ–ಬೆಂಗಳೂರು ರಾತ್ರಿ ವೇಗದೂತ ಸಾರಿಗೆಯ ಸಂಪರ್ಕವನ್ನು ಸಹ ಕಲ್ಪಿಸಿದೆ. ಇವೆರಡೂ ಸಾರಿಗೆಗಳಲ್ಲಿ ಪ್ರಯಾಣಿಕರಿಗಾಗಿ ಇರುವ ಸ್ಥಳಾವಕಾಶದ ಶೇಕಡಾ ೭೦ರಷ್ಟನ್ನು ಮಾತ್ರ ಪ್ರಯಾಣಿಕ ವರ್ಗವು ಬಳಸಲಿತ್ತಿರುವುದರಿಂದ ಪ್ರಸಕ್ತ ಸಾರಿಗೆಗಳಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡಬಯಸುವ ಹೆಚ್ಚಿನ ಪ್ರಯಾಣಿಕರು ಯಾವುದೇ ಅಡಚಣೆಯಿಲ್ಲದೇ ಸ್ಥಳಾವಕಾಶ ಪಡೆಯಬಹುದಾಗಿದೆ. ಈಗಾಗಲೇ ಸೋಗಲದಿಂದ ಕೂಡಲಸಂಗಮ, ಧಾರವಾಡ, ರಾಣೆ ದುರ್ಗ, ಎಡೆಯೂರು ಮತ್ತು ಕುಣಿಗಲ್‌ಗಳಿಗೆ ಸಾರಿಗೆ ಸೌಕರ್ಯ ಒದಗಿಸಲಾಗಿದ್ದು ಅವು ಇನ್ನೂ ಜನಾದಾರಣೆಯನ್ನು ಗಳಿಸಬೇಕಾಗಿದೆ. ಈ ಮೇಲಿನ ಕಾರಣಗಳಿಂದಾಗಿ ಸೋಗಲ ಮಾರ್ಗವಾಗಿ ಬೈಲಹೊಂಗಲದಿಂದ ಬೆಂಗಳೂರಿಗೆ ಸುವಿಹಾರಿ ಸಾರಿಗೆಯನ್ನು ಪ್ರಾರಂಭಿಸುವ ಆಗತ್ಯ ಕಂಡುಬರುತ್ತಿಲ್ಲ.

ಅಧ್ಯಕ್ಷರು.—ಶ್ರೀ ಗೋಪಾಲ ಮಂಕಂಂದ ಕಾನಡೆಯವರು.

೨) ಕರ್ನಾಟಕ ಹಾಲು ಮಹಾ ಮಂಡಳಿಯ ಕೇಂದ್ರ ಕಚೇರಿಯ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಸುಮಾರು ೨೦೦ ಮಂದಿ ನೌಕರರನ್ನು ಕೆಲಸದಿಂದ ತೆಗೆದು ಹಾಕಿರುವುದು.

ಶ್ರೀ ಗೋಪಾಲ ಮಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಮಹಾ ಮಂಡಳಿಯ ಕೇಂದ್ರ ಕಛೇರಿಯಲ್ಲಿ ಹಿಂದಿನ ಮ್ಯಾನೆಜಿಂಗ್ ಡೈರಕ್ಟರ್‌ರವರಿದ್ದ ಸಮಯದಲ್ಲಿ ಸೌಕರಿಯಲ್ಲಿದ್ದವರ ಪೈಕಿ ಸುಮಾರು ೨೦೦ ಮಂದಿ ನೌಕರರುಗಳನ್ನು ಈಗಿನ ಡೈರಕ್ಟರ್ ತೆಗೆದಿದ್ದು ಆ ಪೈಕಿ ಅನುಸೂಚಿತ ಜಾತಿ ಹಾಗೂ ಪಂಗಡಗಳವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದು ತಿಳಿದು ಬಂದಿದ್ದು, ಈಗಿನ ಡೈರಕ್ಟರು ಮಂತ್ರಿ ೨೦ ಮಂದಿ ನೌಕರರುಗಳನ್ನು ಕೆಲಸಕ್ಕೆ ತೆಗೆದುಕೊಂಡಿರುವುದಾಗಿಯೂ ತಿಳಿದು ಬಂದಿದೆ. ಈ ಜನರ ಪೈಕಿ ಹಿಂದೆ ಕೆಲಸ ಮಾಡುತ್ತಿದ್ದ ಅನುಸೂಚಿತ ಜಾತಿ ಮತ್ತು ಪಂಗಡಕ್ಕೆ ಸೇರಿರುವ ನೌಕರರುಗಳು ಎಷ್ಟು ಎಂಬುದನ್ನು ಮತ್ತು ಆ ರೀತಿ ತೆಗೆಯಲು ಕಾರಣ ಏನು ಎಂಬುದನ್ನು ತಿಳಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಪಶು ಸಂಗೋಪನಾ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಲಿಯ ಕೇಂದ್ರ ಕಚೇರಿಯಲ್ಲಿ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಿದ್ದ ಸಮಯದಲ್ಲಿ ನೌಕರಿಯಲ್ಲಿದ್ದವರ ಪೈಕಿ ೨೦೦ ಜನ ನೌಕರರನ್ನು ಈಗಿನ ವ್ಯವಸ್ಥಾಪಕ ನಿರ್ದೇಶಕರು ತೆಗೆದುಹಾಕಿದ್ದಾರೆಯೂ, ಹಾಗೂ ಅವರ ಪೈಕಿ ಅನುಸೂಚಿತ ಜಾತಿ ಹಾಗೂ ಪಂಗಡಗಳವರೇ ಹೆಚ್ಚಿನ ಸಂಖ್ಯೆಯಲ್ಲಿರುವರು ಎಂಬ ಆಪಾದನೆ ಸತ್ಯಕ್ಕೆ ದೂರವಾದದ್ದು.

ಈಗಿನ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ ೧೬–೬–೧೯೮೮ರಂದು ಪೂರ್ವಾಹ್ನ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ಪಹಿಸಿಕೊಂಡಿದ್ದು, ಅವರು ಯಾವುದೇ ನೌಕರರನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ.